## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮೀಣ ಬಿಪಿಓ ಯೋಜನೆಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: 1] ಸರ್ಕಾರಿ ಆದೇಶ ಸಂಖ್ಯೆ ಮಾತಂಇ 39 ಅಚವಿ 2008, ದಿನಾಂಕ 19-1-2009.

2] ಪ್ರೋಫೆಸರ್ ಪಬ್ಲಿಕ್ ಸಿಸ್ಟಮ್ಸ್ ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜಮೆಂಟ್, ಬೆಂಗಳೂರು ಇವರ ಪತ್ರ ದಿನಾಂಕ:15-06-2011

----

ಪ್ರಸ್ತಾವನೆ:

ಮೇಲೆ [1] ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ತಾಲ್ಲೂಕು / ಹೋಬಳಿ ಕೇಂದ್ರ ಸ್ಥಳಗಳಲ್ಲಿ ಗ್ರಾಮಾಂತರ ಬಿ.ಪಿ.ಓ. ಕೇಂದ್ರಗಳನ್ನು ಸ್ಥಾಪಿಸುವ ಹೊಸ ಯೋಜನೆಗೆ 2008-09ನೇ ಸಾಲಿನಿಂದ ಅನುಷ್ಠಾನಗೊಳಿಸಲು ಆದೇಶ ಹೊರಡಿಸಲಾಗಿದೆ.

2008-09ನೇ ಸಾಲಿನಿಂದ 2010-11ನೇ ಸಾಲಿನ ವರೆಗೆ 31 ಗ್ರಾಮೀಣ ಘಟಕಗಳಿಗೆ ಅನುಮೋದನೆ ನೀಡಿದ್ದು, ಅದರಲ್ಲಿ 25 ಘಟಕಗಳು ಕಾರ್ಯಾಚರಣೆಯನ್ನು ಪ್ರಾರಂಭಿಸಲು ಕ್ರಮ ಕೈಗೊಂಡಿವೆ. ಇಲಾಖಾ ಅಧಿಕಾರಿಗಳು ಗ್ರಾಮೀಣ ಬಿಪಿಓ ಕೇಂದ್ರಗಳ ತಪಾಸಣೆ ಮಾಡಿದಾಗ ಗ್ರಾಮೀಣ ಬಿಪಿಓ ಘಟಕಗಳ ಕಾರ್ಯ ಮತ್ತು ಕಾರ್ಯಾಚರಣೆಗಳಲ್ಲಿ ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡು ಬಂದಿದೆ. ಇಲಾಖೆಯು ಏಪ್ರಿಲ್ 2011 ರಲ್ಲಿ ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜಮೆಂಟ್, ಬೆಂಗಳೂರು ಇವರಿಂದ ಸದರಿ ಯೋಜನೆಯ ಮೂರನೇ ಪಕ್ಷದ ಸ್ವತಂತ್ರ ಮೌಲ್ಯಮಾಪನ ಮಾಡಿ ವರದಿ ಸಲ್ಲಿಸುವಂತೆ ಕೋರಲಾಗಿತ್ತು.

ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜಮೆಂಟ್, ಬೆಂಗಳೂರು ಇವರು ಸದರಿ ಯೋಜನೆ ಅನುಷ್ಠಾನವನ್ನು ಉತ್ತಮಗೊಳಿಸಲು ಸದರಿ ಯೋಜನೆಯ ಮೌಲ್ಯಮಾಪನ ವರದಿಯನ್ನು ಯೋಜನೆಯ ಪೂರ್ಣ ಸೂಚಿಯಲ್ಲಿ ಈ ಕೆಳಕಂಡ ಮಾರ್ಪಾಡನ್ನು ಮಾಡುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಐಐಎಮ್-ಬಿ ವರದಿಯ ಪ್ರಕಾರ, ಈ ಕೆಳಕಂಡಂತೆ ಗ್ರಾಮೀಣ ಬಿಪಿಓ ಯೋಜನೆಯನ್ನು ಪುನರ್‌ರಚಿಸಲು ಪ್ರಸ್ತಾಪಿಸಲಾಗಿದೆ:-

1] ಗ್ರಾಮೀಣ ಬಿಪಿಓ ಘಟಕಗಳನ್ನು ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಪಟ್ಟಣ / ತಾಲ್ಲೂಕು ಕೇಂದ್ರಗಳು / ಹೋಬಳಿ ಕೇಂದ್ರ ಸ್ಥಾನಗಳಲ್ಲಿ ಸ್ಥಾಪಿಸಲು ಮಂಜೂರು ಮಾಡಲಾಗುವುದು.

2] ಅನುಭವವಿಲ್ಲದ ಹೊಸ ಉದ್ದಿಮೆದಾರರ ಬದಲಿಗೆ ಸ್ಥಾಪನೆಯಾದ ಬಿಪಿಓ ಆಟಗಾರರ [established BPO players] ಗ್ರಾಮೀಣ ಬಿಪಿಓ ಘಟಕಗಳಿಗೆ ಮಂಜೂರಾತಿ ನೀಡಲು ಪರಿಗಣಿಸಲಾಗುವುದು.

3] ರೂ.20.00 ಲಕ್ಷ ಬಂಡವಾಳ ಹೂಡಿಕೆ ಸಬ್ಸಿಡಿಯನ್ನು ಸ್ಥಗಿತಗೊಳಿಸಲಾಗುತ್ತದೆ.

Karnataka Biotechnology & Inforamation Technology Services
RECEIVED
Date : 21/10/11 | 2223
Time :

4] ರಾಜ್ಯ ಸರ್ಕಾರದ ಆರ್ಥಿಕ ಬೆಂಬಲವನ್ನು ಮಾನವ ಶಕ್ತಿ ತರಬೇತಿ ಕಟ್ಟಡ ಬಾಡಿಗೆ ಮತ್ತು ಅಂತರ್‌ಜಾಲ ಸಂಪರ್ಕ ವೆಚ್ಚಕ್ಕಾಗಿ ಮಾತ್ರ ನೀಡಲಾಗುವುದು. ಪ್ರತಿ ಘಟಕಕ್ಕೆ ರೂ.40 ಲಕ್ಷದಿಂದ ಗರಿಷ್ಠ ರೂ.20 ಲಕ್ಷಗಳ ಆರ್ಥಿಕ ಬೆಂಬಲಕ್ಕೆ ಸೀಮಿತಗೊಳಿಸಲಾಗುವುದು.

5] ಪ್ರತಿ ಗ್ರಾಮೀಣ ಬಿಪಿಓ ಘಟಕದಲ್ಲಿ 50 ಕ್ಕಿಂತ ಕಡಿಮೆ ನೌಕರರು ಇರತಕ್ಕದ್ದಲ್ಲ.

6] ಗ್ರಾಮೀಣ ಬಿಪಿಓ ಘಟಕಗಳಲ್ಲಿ ಎಲ್ಲಾ ಸೌಕರ್ಯಗಳು ಅಂದರೆ, ಭದ್ರತೆ, ಬಯೋಮೆಟ್ರಿಕ್ ಹಾಜರಾತಿ, ಸಿಸಿಟಿವಿ / ಕ್ಯಾಮೆರಾಗಳು, ಕ್ಯಾಂಟೀನ್ ಸೌಲಭ್ಯಗಳು ಮತ್ತು ಅಲ್ಲಿನ ನೌಕರರ ಸ್ಥೈರ್ಯ ಹೆಚ್ಚಿಸಲು ಅಗತ್ಯವಿರುವ ಇತರ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಆದಕಾರಣ, ಅಸ್ತಿತ್ವದಲ್ಲಿರುವ ಬಿಪಿಓ ಯೋಜನೆಯನ್ನು ಪುನರ್ ರಚಿಸುವುದರಿಂದ ಹಾಗೂ ಸ್ಥಳೀಯ ಉದ್ಯಮಿದಾರರನ್ನು ಪ್ರೋತ್ಸಾಹಿಸುವ ಬದಲಿಗೆ ಬಿಪಿಓ ಘಟಕಗಳಲ್ಲಿ ಸ್ಥಾಪನೆಯಾದ ಬಿಪಿಓ ಆಟಗಾರರಿಗೆ (established BPO players) ಗ್ರಾಮೀಣ ಬಿಪಿಓ ಘಟಕಗಳಿಗೆ ಮಂಜೂರಾತಿ ನೀಡಲು ಪರಿಗಣಿಸುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಉದ್ಯೋಗ ಸೃಷ್ಟಿಸುವ ಬಗ್ಗೆ ಗಮನ ಹರಿಸಿದಂತಾಗುತ್ತದೆಂದು ಸಲಹೆ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 77 ಎಡಿಎಂ 2011, ಬೆಂಗಳೂರು ದಿನಾಂಕ 17-10-2011**

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಗ್ರಾಮೀಣ ಬಿಪಿಓ ಯೋಜನೆಯನ್ನು ಈ ಕೆಳಕಂಡಂತೆ ಪರಿಸ್ಕರಿಸಿ ಪುನರ್ ರಚಿಸಿ ಆದೇಶಿಸಲಾಗಿದೆ.

1] ಗ್ರಾಮೀಣ ಬಿಪಿಓ ಘಟಕಗಳನ್ನು ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಪಟ್ಟಣ / ತಾಲ್ಲೂಕು ಕೇಂದ್ರಗಳು / ಹೋಬಳಿ ಕೇಂದ್ರ ಸ್ಥಾನಗಳಲ್ಲಿ ಸ್ಥಾಪಿಸಲು ಮಂಜೂರು ಮಾಡಲಾಗುವುದು.

2] ಅನುಭವವಿಲ್ಲದ ಹೊಸ ಉದ್ದಿಮೆದಾರರ ಬದಲಿಗೆ ಸ್ಥಾಪನೆಯಾದ ಬಿಪಿಓ ಆಟಗಾರರ [established BPO players] ಗ್ರಾಮೀಣ ಬಿಪಿಓ ಘಟಕಗಳಿಗೆ ಮಂಜೂರಾತಿ ನೀಡಲು ಪರಿಗಣಿಸಲಾಗುವುದು.

3] ರೂ.20.00 ಲಕ್ಷ ಬಂಡವಾಳ ಹೂಡಿಕೆ ಸಬ್ಸಿಡಿಯನ್ನು ಸ್ಥಗಿತಗೊಳಿಸಲಾಗುತ್ತದೆ.

4] ರಾಜ್ಯ ಸರ್ಕಾರದ ಆರ್ಥಿಕ ಬೆಂಬಲವನ್ನು ಮಾನವ ಶಕ್ತಿ ತರಬೇತಿ ಕಟ್ಟಡ ಬಾಡಿಗೆ ಮತ್ತು ಅಂತರ್‌ಜಾಲ ಸಂಪರ್ಕ ವೆಚ್ಚಕ್ಕಾಗಿ ಮಾತ್ರ ನೀಡಲಾಗುವುದು. ಪ್ರತಿ ಘಟಕಕ್ಕೆ ರೂ.40 ಲಕ್ಷದಿಂದ ಗರಿಷ್ಠ ರೂ.20 ಲಕ್ಷಗಳ ಆರ್ಥಿಕ ಬೆಂಬಲಕ್ಕೆ ಸೀಮಿತಗೊಳಿಸಲಾಗುವುದು.

5] ಪ್ರತಿ ಗ್ರಾಮೀಣ ಬಿಪಿಓ ಘಟಕದಲ್ಲಿ 50 ಕ್ಕಿಂತ ಕಡಿಮೆ ನೌಕರರು ಇರತಕ್ಕದ್ದಲ್ಲ.

6] ಗ್ರಾಮೀಣ ಬಿಪಿಓ ಘಟಕಗಳಲ್ಲಿ ಎಲ್ಲಾ ಸೌಕರ್ಯಗಳು ಅಂದರೆ, ಭದ್ರತೆ, ಬಯೋಮೆಟ್ರಿಕ್ ಹಾಜರಾತಿ, ಸಿಸಿಟಿವಿ / ಕ್ಯಾಮೆರಾಗಳು, ಕ್ಯಾಂಟೀನ್ ಸೌಲಭ್ಯಗಳು ಮತ್ತು ಅಲ್ಲಿನ ನೌಕರರ ಸ್ಥೈರ್ಯ ಹೆಚ್ಚಿಸಲು ಅಗತ್ಯವಿರುವ ಇತರ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಎಫ್‌ಡಿ 351 ವೆಚ-2/2011 ದಿನಾಂಕ:06-09-2011ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

[ಇ. ರಾಮಕೃಷ್ಣಪ್ಪ]
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

**ಪ್ರತಿ:**

1. ಮಹಾಲೇಖಾಪಾಲರು, [ಆಡಿಟ್ & ಅಕೌಂಟ್ಸ್] ಕರ್ನಾಟಕ, ಬೆಂಗಳೂರು,
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ [ಸಚಿವ ಸಂಪುಟ ವ್ಯವಹಾರಗಳು] ವಿಧಾನ ಸೌಧ, ಬೆಂಗಳೂರು ಪ್ರತಿ ಮಾಹಿತಿಗಾಗಿ.
3. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಯು.ಎನ್.ಐ. ಕಟ್ಟಡ, ಬೆಂಗಳೂರು,
4. ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ಸಂಸ್ಥೆ, ಯು.ಎನ್.ಐ. ಕಟ್ಟಡ, ಬೆಂಗಳೂರು,
5. ಪ್ರಧಾನ ವ್ಯವಸ್ಥಾಪಕರು, ಕೆಬಿಟ್ಸ್ ಸಂಸ್ಥೆ, ಯು.ಎನ್.ಐ. ಕಟ್ಟಡ, ಬೆಂಗಳೂರು,
6. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು,
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ [ವೆಚ್ಚ-2] ವಿಧಾನಸೌಧ,
8. ಉಪ ನಿರ್ದೇಶಕರು, ಟಿಎನ್‌ಎಂಸಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು,
9. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ.
10. ವಾರದ ಗೆಜೆಟ್ / ರಕ್ಷಾ ಕಡತ / ಬಿಡಿ ಪ್ರತಿಗಳು.